ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ಮುಖ್ಯ ರಸ್ತೆಗಳು Imp to Roads, Drains & Drilling Borewells in W.No: 5 & 6 ಕೈಗೆ ತೆಗೆದುಕೊಳ್ಳುವ ಬಗ್ಗೆ ಪುಟದ ಸಂಖ್ಯೆ –01–

ಕಡತದ ಸಂಖ್ಯೆ AEE/BSP/ET/37/2020-21

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು	02/7/2020

ಕಂದಾಯ ಪಟ್ಟಿ ವರ್ಕ್ ಸ್ಲಿಪ್‌ಗೆ ಅನುಮೋದನೆ ಕೋರಿ

ಮಂಡಿಸಿದೆ :

ವಿಷಯ :: Improvements to Roads, Drains and Drilling Borewells in Ward No 05 and 06 of Byatarayanapura Sub Division of Byatarayanapura Division (Est Cost : 760.0 Lakhs) ಈ ಕಾಮಗಾರಿಯ ಮಾರ್ಪಾಡು ಅಂದಾಜು ಪಟ್ಟಿ, ವರ್ಕ್ ಸ್ಲಿಪ್‌ಗೆ ಅನುಮೋದನೆ ಕೋರಿ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ Improvements to Roads, Drains and Drilling Borewells in Ward No 05 and 06 of Byatarayanapura Sub Division of Byatarayanapura Division ಕಾಮಗಾರಿಯ ಸಂಖ್ಯೆ: 005-16-000038 ರಲ್ಲಿ ರೂ.760.00 ಲಕ್ಷಗಳ ಮೊತ್ತಕ್ಕೆ ಅನುಮೋದನೆಗೊಂಡು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಗುತ್ತಿಗೆದಾರರಾದ M/s Aishwarya Infrastructure and Developers ರವರಿಗೆ ರೂ. 6,67,54,480.31ಗಳ ಮೊತ್ತಕ್ಕೆ ಸಂಖ್ಯೆ: BBMP/EE/BTP/WO/178/2016-17 ದಿನಾಂಕ: 03/03/2017 ರಂದು ಕಾರ್ಯಾದೇಶ ನೀಡಲಾಗಿರುತ್ತದೆ.

ಬಿ.ಬಿ.ಎಂ.ಪಿಯ ಮಿತಿಯಲ್ಲಿ 110 ಹಳ್ಳಿಗಳಲ್ಲಿ ಕುಡಿಯುವ ನೀರು ಒದಗಿಸಲು ಮತ್ತು ಭೂಗತ ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನು ಬಿಡಬ್ಲ್ಯೂಎಸ್‌ಎಸ್‌ಬಿ ನಿರ್ವಹಿಸಿದ್ದು, ಇದರಿಂದ ರಸ್ತೆಗಳು ಹದಗೆಟ್ಟಿವೆ. ಈ ಪ್ರದೇಶಗಳಲ್ಲಿನ ರಸ್ತೆಗಳ ಅಭಿವೃದ್ಧಿಗೆ ಕಾಮಗಾರಿಯನ್ನು ಸ್ಥಳಕ್ಕನುಗುಣವಾಗಿ ಹಾಗೂ ತಾಂತ್ರಿಕವಾಗಿ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಕಾಮಗಾರಿ ನಿರ್ವಹಿಸಬೇಕಾಗಿದ್ದು, ಈ ಸಂಧರ್ಭ ಅನುಮೋದಿತ ಅಂದಾಜು ಪಟ್ಟಿಯಲ್ಲಿರುವ ಕೆಲವು ಅಂಶಗಳಲ್ಲಿನ ಪರಿಮಾಣವು ಹೆಚ್ಚುವರಿಯಾಗುತ್ತಿದ್ದು, ಕೆಲವೊಂದು ಅಂಶಗಳಲ್ಲಿ ಉಳಿತಾಯವಾಗಿರುತ್ತದೆ ಹಾಗೂ ಕೆಲವು ಅಂಶಗಳನ್ನು ಹೆಚ್ಚುವರಿಯಾಗಿ ಅಳವಡಿಸಿ ಕೊಳ್ಳಬೇಕಾಗಿರುತ್ತದೆ. ಆದರಂತೆ ಗುತ್ತಿಗೆದಾರರು ನಮೂದಿಸಿರುವ ಅನುಮೋದಿತ ದರಗಳನ್ನು ಅಳವಡಿಸಿಕೊಂಡು ಮಾರ್ಪಾಡು ಅಂದಾಜು ಪಟ್ಟಿ ಹಾಗೂ ವರ್ಕ್ ಸ್ಲಿಪ್‌ಗಳನ್ನು ತಯಾರಿಸಿ ಈ ಕೆಳಕಂಡ ವಿವರಗಳೊಂದಿಗೆ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಅನುಮೋದನಗೊಂಡ ಕಾಮಗಾರಿಯ ಅಂದಾಜು ಮೊತ್ತ	:	ರೂ. 7,03,43,330.14
ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಮೊತ್ತ	:	ರೂ. 7,03,43,330.14
ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿರುವ ಮೊತ್ತ	:	ರೂ. 6,67,54,480.31
ಟೆಂಡರ್ ಅಂಶಗಳಲ್ಲಿ ಆಗುತ್ತಿರುವ ಹೆಚ್ಚುವರಿ ಮೊತ್ತ (Excess)	:	ರೂ. 1,55,11,821.00
ಟೆಂಡರ್ ಅಂಶಗಳಲ್ಲಿ ಆಗುತ್ತಿರುವ ಉಳಿತಾಯ ಮೊತ್ತ (Savings)	:	ರೂ. 1,55,32,417.00
EIRL ಮೊತ್ತ.	:	ರೂ. –
ವರ್ಕ್ ಸ್ಲಿಪ್ ಮೊತ್ತ	:	**ರೂ. 1,55,11,821.00**
EIRL , ವರ್ಕ್ ಸ್ಲಿಪ್ ಮೊತ್ತ ಸೇರಿದಂತೆ ಒಟ್ಟು ಕಾಮಗಾರಿಗೆ ತಗುಲಿದ ಮೊತ್ತ	:	ರೂ. 6,67,33,872.00
ಅನುಮೋದಿತ ಅಂದಾಜು ಮೊತ್ತಕ್ಕೆ ಹೊಲಿಸಿದಾಗ ಉಳಿತಾಯವಾದ ಮೊತ್ತ	:	ರೂ.20,60,11.31

ಪು.ತಿ.ನೋ

ವಿಷಯ ಎಸಗಿರಿದು ಬಂಬುಬ ಕ್ಲೈಂ ಅನುಮೋದನೆ ಕುರಿತು

ಪುಟದ ಸಂಖ್ಯೆ 2

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
(07)	ಮಾರ್ಪಾಡಿತ ಅಂದಾಜು ಮೊತ್ತವು ಮೂಲ ಮಂಜೂರಾದ ಅಂದಾಜು ಮೊತ್ತಕ್ಕೆ ಹೋಲಿಸಿದಾಗ ಉಳಿತಾಯವಾಗಲಿದ್ದು ಪಾಲಿಕೆಯ ಬೊಕ್ಕಸಕ್ಕೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲದಿರುವುದರಿಂದ ಸದರಿ ಮಾರ್ಪಾಡು ಅಂದಾಜು ಪಟ್ಟಿ ಹಾಗೂ ವರ್ಕ್ ಸ್ಲಿಪ್‌ಗಳನ್ನು ಈ ಕಡತದಲ್ಲಿರಿಸಿ ಅನುಮೋದನೆಗಾಗಿ ಮಂಡಿಸಿದೆ. ಮುಂದುವರೆದು,
(08)	ಬ್ಯಾಟರಾಯನಪುರ ಉಪ ವಿಭಾಗದ, ವಾರ್ಡ್ ನಂ.06 ದಾಸರಹಳ್ಳಿ, ರಾಚೇನಹಳ್ಳಿ, ಥಣಿಸಂದ್ರ, ಹಾಗೂ ವಾರ್ಡ್ ನಂ.05 ರಲ್ಲಿ ಚೊಕ್ಕನಹಳ್ಳಿ, ತಿರುಮೇನಹಳ್ಳಿ, ಕಟ್ಟಿಗೆನಹಳ್ಳಿ, ಶ್ರೀನಿವಾಸಪುರ, ಬೆಳ್ಳಹಳ್ಳಿಗಳು ಬಿ.ಬಿ.ಎಂ.ಪಿ ಗೆ ಹೊಸದಾಗಿ ಸೇರಿರುವ 110 ಹಳ್ಳಿಗಳಲ್ಲಿ ಬರುವ ಹಳ್ಳಿಗಳಾಗಿದ್ದು, ಈ ಹಳ್ಳಿಗಳಲ್ಲಿ BWSSB ವತಿಯಿಂದ ಹೊಸದಾಗಿ ಕಾವೇರಿ ಕುಡಿಯುವ ನೀರಿನ ಹಾಗೂ ಒಳಚರಂಡಿ ಕೊಳವೆಗಳನ್ನು ಅಳವಡಿಸುವ ಕಾಮಗಾರಿ ಕೈಗೊಂಡಿರುವುದರಿಂದ, ಕೆಲವು ಕಾಮಗಾರಿ ನಿರ್ವಹಿಸಿ, BWSSB ರವರ ಕೆಲಸ ಪೂರ್ಣಗೊಳ್ಳುವವರೆಗು ಉಳಿದ ಡಾಂಬರೀಕರಣದ ಕಾಮಗಾರಿ ಸ್ಥಗಿತಗೊಳಿಸಲಾಗಿತ್ತು. ಪ್ರಸ್ತುತ BWSSB ಕಾಮಗಾರಿ ಪೂರ್ಣಗೊಂಡಿರುವುದರಿಂದ ಈ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಆದ್ದರಿಂದ ಕಾಮಗಾರಿಗೆ ನಿಗದಿಪಡಿಸಿರುವ ಅವಧಿ ವಿಸ್ತರಿಸುವುದು ಅವಶ್ಯಕವಾಗಿರುತ್ತದೆ. (E.O.T) ಹಾಗೂ ಸದರಿ ಕಾಮಗಾರಿಯ ಜಾಬ್ ಸಂಖ್ಯೆ: 005-16-000038 freeze ಆಗಿರುವುದಾಗಿ ತಿಳಿದು ಬಂದಿದ್ದು, ಕಾಮಗಾರಿ ಪ್ರಗತಿಯಿಯಲ್ಲಿರುವುದರಿಂದ ಸದರಿ ಜಾಬ್ ಸಂಖ್ಯೆಯನ್ನು Defreeze ಮಾಡಬೇಕಾಗಿ ಕೋರಲಾಗಿದೆ.
(09)	ಸಹಾಯಕ ಅಭಿಯಂತರರು ಬಿ.ಬಿ.ಎಂ.ಪಿ ಬ್ಯಾಟರಾಯನಪುರ ಉಪ ವಿಭಾಗ
(10)	ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬ್ಯಾಟರಾಯನಪುರ ಉಪ-ವಿಭಾಗ ಬಿ.ಬಿ.ಎಂ.ಪಿ. ಬೆಂಗಳೂರು-26
(11)	ಕಾ.ಪಾ.ಅ (ಬ್ಯಾಟರಾಯನಪುರ)

ಸಂಖ್ಯೆ 679
ದಿನಾಂಕ 7/7/20

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ಎಚ್ಎಸ್ಆರ್ ಲೇಔಟ್ ಸಿವಿಲ್ ಕಾಮಗಾರಿಗಳ ಕುರಿತು ಪುಟದ ಸಂಖ್ಯೆ 3

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
111) 7	ಕಂಡಿಕೆ (01) ರಿಂದ (06) ರವರೆಗಿನ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ಉಪವಿಭಾಗ ರವರ ವರದಿಯನ್ನು ಅವಗಾಹನೆಗೆ ತರುತ್ತಾ, Improvements to Roads, Drains and Drilling Borewells in Ward No.05 and 06 of Byatarayanapura Sub Division of Byatarayanapura Division ಕಾಮಗಾರಿಗೆ ಸಂಬಂಧಿಸಿದಂತೆ ಕರೆಯಲಾದ ಟೆಂಡರ್‌ನಲ್ಲಿ ಭಾಗವಹಿಸಿ ಯಶಸ್ವಿಯಾದ ಹಾಗೂ ಅತಿಕಡಿಮೆ ನಮೂದಿಸಿರುವ ಗುತ್ತಿಗೆದಾರರಾದ M/s. Aishwarya Infrastructure and Developers ರವರಿಗೆ ವಿಭಾಗ ವತಿಯಿಂದ ಕಾರ್ಯಾದೇಶ ನೀಡಲಾಗಿರುತ್ತದೆ.
112) 8	ಮುಂದುವರೆದು ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ರೂ.6,67,33,872.00/- ಗಳಿಗೆ ಮಾರ್ಪಾಡು ಅಂದಾಜುಪಟ್ಟಿಯನ್ನು (Workslip ಒಳಗೊಂಡಂತೆ) ಸಿದ್ಧಪಡಿಸಿ ವರ್ಕ್‌ಸ್ಲಿಪ್ ಹಾಗೂ ಮಾರ್ಪಾಡು ಅಂದಾಜುಪಟ್ಟಿಗೆ ಅನುಮೋದನೆ ಕೋರುತ್ತಾ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ಉಪವಿಭಾಗ ರವರು ಸಲ್ಲಿಸಿದ್ದು, ಸದರಿ ಕಾಮಗಾರಿಯನ್ನು ಮಾರ್ಪಾಡಿತ ಅಂದಾಜುಪಟ್ಟಿಯಂತೆ ನಿರ್ವಹಿಸಿದಲ್ಲಿ ಒಟ್ಟಾರೆಯಾಗಿ ಉಳಿತಾಯವಾಗಲಿದ್ದು, ಪಾಲಿಕೆಗೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲವಾದ್ದರಿಂದ ಸದರಿ ಮಾರ್ಪಾಡಿತ ಅಂದಾಜುಪಟ್ಟಿಗೆ ಅನುಮೋದನೆ ಹಾಗೂ ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುವ ಸ್ಥಳಗಳಲ್ಲಿ BWSSB ವತಿಯಿಂದ ಹೊಸದಾಗಿ ಕಾವೇರಿ ಕುಡಿಯುವ ನೀರಿನ ಹಾಗೂ ಒಳಚರಂಡಿ ಕೊಳವೆಗಳನ್ನು ಅಳವಡಿಸುವ ಕಾಮಗಾರಿಯನ್ನು ಕೈಗೊಂಡಿದ್ದು, ಕೆಲವು ಕಾಮಗಾರಿಯನ್ನು ನಿರ್ವಹಿಸಿ BWSSB ರವರ ಕೆಲಸ ಪೂರ್ಣಗೊಳ್ಳುವವರೆಗೂ ಉಳಿದ ಡಾಂಬರೀಕರಣದ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿತ್ತು.
113) 9	ಪ್ರಸ್ತುತ BWSSB ರವರು ಕೈಗೊಂಡಿರುವ ಕಾಮಗಾರಿಯು ಪೂರ್ಣಗೊಂಡಿದ್ದು, M/s. Aishwarya Infrastructure and Developers ರವರು ಕಾಮಗಾರಿಯನ್ನು ಕೈಗೊಳ್ಳಲು ಅವಧಿಯನ್ನು (EOT) ವಿಸ್ತರಿಸಲು ಹಾಗೂ ಕಾಮಗಾರಿಯ ಜಾಬ್ ಸಂಖ್ಯೆ: 005-16-000038 Freeze ಆಗಿದ್ದು, ಸದರಿ ಕಾಮಗಾರಿಯು ಅವಶ್ಯಕವಾಗಿರುವುದರಿಂದ ಕಾಮಗಾರಿಯನ್ನು De-freeze ಮಾಡಿಕೊಡಲು ಮುಂದಿನ ಆದೇಶಕ್ಕಾಗಿ ಕಡತವನ್ನು ಸಲ್ಲಿಸಿದೆ.

ಕಾರ್ಯಪಾಲಕ ಅಭಿಯಂತರರು 10/07
ಬ್ಯಾಟರಾಯನಪುರ ವಿಭಾಗ.

ಮುಖ್ಯ ಅಭಿಯಂತರರು (ಯ.ವ)

ಕಾರ್ಯಪಾಲಕ ಅಭಿಯಂತರರ ಕಛೇರಿ
360
05 AUG 2020
ಬೆಂಗಳೂರು
ಬಿ.ಬಿ.ಎಂ.ಪಿ.ಯಲಹಂಕ ವಲಯ.

ವಿಷಯ : ಮಾರ್ಪಾಡು ಕಾಮಗಾರಿಯ ಒಪ್ಪಿಗೆ ಮತ್ತು ಆದೇಶ ಕುರಿತು.

ಪುಟದ ಸಂಖ್ಯೆ 4

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ 07ರಿಂದ 09ರವರೆಗಿನ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗರವರು ತಿಳಿಸಿರುವಂತೆ ಸದರಿ ಕಾಮಗಾರಿ Improvements to roads, drains and drilling borewells in ward no-05 and 6 of Byatarayanapura sub division ಗುತ್ತಿಗೆದಾರರಾದ M/s Aishwarya infrastructure and Developers ರವರಿಗೆ ಕಾಮಗಾರಿಯನ್ನು ಸ್ಥಳಕ್ಕನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸಲು ಅಂದಾಜು ಪಟ್ಟಿಯಲ್ಲಿನ ಮಂಜೂರಾದ ಪರಿಮಾಣಗಳಿಗಿಂತ ಕೆಲವು ಅಂಶಗಳು ಹೆಚ್ಚುವರಿ/ ಕಡಿಮೆಯಾಗಿರುತ್ತದೆ ಅದರಂತೆ ಸ್ಥಳಕ್ಕನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸಲು ಪರಿಮಾಣದ ಅಂಶಗಳು ಈ ಕೆಳಕಂಡಂತಿರುತ್ತದೆ.

1(5)

1. ಕಾಮಗಾರಿಯ ಅಂದಾಜು ಮೊತ್ತ ರೂ 760.00ಲಕ್ಷಗಳು
2. ಮಾರ್ಪಾಡು ಅಂದಾಜು ಮೊತ್ತ ರೂ 6,67,33,872.00 ಲಕ್ಷಗಳು
3. ವರ್ಕ್ಸ್‌ಸ್ಲಿಪ್ ಮೊತ್ತ ರೂ 1,55,11,821 (9.36%)

ಮೇಲ್ಕಂಡ ಮಾರ್ಪಾಡಿತ ಮೊತ್ತವನ್ನು ಟೆಂಡರ್ ಕಾಮಗಾರಿಯ ಉಳಿತಾಯ ಮೊತ್ತದಲ್ಲಿ ಭರಿಸಲು ಹಾಗೂ ವರ್ಕ್ಸ್‌ಸ್ಲಿಪ್ ಅನುಮೋದನೆ ಕಾಮಗಾರಿಯನ್ನು ಕೈಗೊಳ್ಳಲು ಅವಧಿಯನ್ನು (EOT) ವಿಸ್ತರಿಸಲು ಹಾಗೂ ಕಾಮಗಾರಿಯ ಜಾಬ್ ಸಂಖ್ಯೆ:005-16-000038 Freeze ಆಗಿದ್ದು, ಸದರಿ ಕಾಮಗಾರಿಯು ಅವಶ್ಯಕವಾಗಿರುವುದರಿಂದ ಕಾಮಗಾರಿಯನ್ನು De-freeze ಮಾಡಲು ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ರವರು ಕೋರಿದ್ದು, ಮುಂದಿನ ಆದೇಶಕ್ಕೆ ಸಲ್ಲಿಸಿದೆ.

116

117 ಮು.ಲ (ಉಪ) ಕಂಡಿಕೆ (4) ರಿಂದ (11) ರ ವರೆಗೆ ವಿವರಿಸಿರುವಂತೆ ಈ ಕಾಮಗಾರಿಯ ಪರಿಷ್ಕೃತ ಅಂದಾಜು ಪಟ್ಟಿಗೆ ಮುಖ್ಯ ಅಭಿಯಂತರರು ಯಲಹಂಕ ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಂದ ತಾಂತ್ರಿಕ ಸಮ್ಮತಿಯನ್ನು ಪಡೆಯಲಾಗಿದೆ. ಸದರಿ ಕಡತವನ್ನು ಮೇಲಾಧಿಕಾರಿಗಳ ಅನುಮತಿಗಾಗಿ ಮಂಡಿಸಿದೆ.

118 ಪರಿಶೀಲನೆ ಮತ್ತು ಅಗತ್ಯ ಕ್ರಮಕ್ಕಾಗಿ ಮಂಡಿಸಿದೆ.

10/8/20.
ವಿಶೇಷ ಆಯುಕ್ತರು (ಆಸ್ತಿಗಳು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

119 CE, Hrly

(ಶ್ರೀ ಶಂಕರ್ ಕುಮಾರ್ EE)

ಮು.ಅ(ಜಾ ಮೆ ಪಿ.ಸಿ.ಇ.ಡಿ) ರವರ ಕಛೇರಿ
ಬೃ.ಬೆಂ.ಮ.ಪಾ

ಮುಖ್ಯ ಅಭಿಯಂತರರು
(ಜಾಗೃತ ಮತ್ತು ಪಿ.ಪಿ.ಇ.)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಾನ್ಯ ಸ್ವೀಕೃತಿಸಂಖ್ಯೆ: ದಿನಾಂಕ: 10/08/2020.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ Improvements to roads drains and drilling bore wells in ward no-05 & 06 in Bayatarayanapura subdivision (Est cost 760.00 lakhs) ಪುಟದ ಸಂಖ್ಯೆ -5-

ಕಡತದ ಸಂಖ್ಯೆ CE(TUEC)BH/237/2020-21

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
120	ಸಲ್ಲಿಸಿದೆ:- ಪ್ರಸ್ತಾಪಿತ ಪ್ರಕರಣಕ್ಕೆ ಸಂಬಂಧಿಸಿದಂತೆ, ಕಂಡಿಕೆ (118) ರಲ್ಲಿ ವಿಶೇಷ ಆಯುಕ್ತರು (ಆಸ್ತಿಗಳು)ರವರು ಪರಿಶೀಲಿಸಿ ಮಂಡಿಸಿ ಎಂದು ಆದೇಶಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕಡತವನ್ನು ಪರಿಶೀಲಿಸಲಾಗಿ Improvements to roads and drains and drilling bore well in ward no -05 & 06 in Bayatarayanapura subdivision (Est cost 760.00 lakhs). ರ ಕಾಮಗಾರಿಯಾಗಿದ್ದು, ಸದರಿ ಕಾಮಗಾರಿಗೆ ಮಾರ್ಪಾಡು ಅಂದಾಜು ಪಟ್ಟಿಯನ್ನು ತಯಾರಿಸಿ workslip ಮತ್ತು ಮಾರ್ಪಾಡು ಅಂದಾಜು ಪಟ್ಟಿಗೆ ಅನುಮೋದನೆ, ಕಾಲಾವಧಿ ವಿಳಂಬಕ್ಕೆ (EOT) ಕಾಲಾವಧಿ ವಿಸ್ತರಣೆಗೆ ಅನುಮೋದನೆ ಹಾಗೂ ಸದರಿ ಕಾಮಗಾರಿಯು ಫ್ರೀಜ್ ಆಗಿದ್ದು, ಡಿ-ಫ್ರೀಜ್‌ಗೆ ಕೋರಿ ಪ್ರಸ್ತಾವನೆ ಸಲ್ಲಿಸಿರುವ ವಿಷಯವಾಗಿರುವುದನ್ನು ಅವಗಾಹನೆಗೆ ಸಲ್ಲಿಸಿದೆ.
121	ಸದರಿ ಕಡತವನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳನ್ನು ವರದಿಸಿದೆ. • ಪ್ರಶ್ನಿತ ಕಾಮಗಾರಿಗೆ ದಿ;03-03-2017 ರಂದು ಕಾರ್ಯಾದೇಶವನ್ನು ನೀಡಿ ಈ ತಹಲ್ ವರೆವಿಗೂ ಭೌತಿಕವಾಗಿ ಶೇಕಡ ಎಷ್ಟು ಕಾಮಗಾರಿಯನ್ನು ನಿರ್ವಹಿಸಲಾಗಿದೆ ಎಂಬುದರ ಬಗ್ಗೆಯಾಗಲೀ ಅಥವಾ ಕಾಮಗಾರಿಯನ್ನು ಇದುವರೆವಿಗೂ ಪ್ರಾರಂಭಗೊಳ್ಳದಿರುವ ಬಗ್ಗೆಯಾಗಲೀ ಮಾಹಿತಿ/ವರದಿ ಕಡತದಲ್ಲಿ ಲಭ್ಯವಿಲ್ಲ. • ಪ್ರಶ್ನಿತ ಕಾಮಗಾರಿಯನ್ನು ನಿರ್ವಹಿಸುವ ಮುನ್ನ ಕಾಮಗಾರಿಯನ್ನು ನಿರ್ವಹಿಸಲು ಉದ್ದೇಶಿಸಿರುವ ಸ್ಥಳಗಳ ಛಾಯಾ ಚಿತ್ರಗಳು ಲಭ್ಯವಿಲ್ಲ. • ಪ್ರಶ್ನಿತ ಕಾಮಗಾರಿಗೆ workslip ಮತ್ತು ಮಾರ್ಪಾಡು ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುವುದು ಕಡತದಲ್ಲಿನ ದಾಖಲಾತಿಗಳಂತೆ ಕಂಡುಬಂದಿದ್ದು, ಆದರೆ ಸದರಿ ಕಾಮಗಾರಿಯನ್ನು ಮಾರ್ಪಾಡು ಮಾಡಲು workslip ಮತ್ತು ಮಾರ್ಪಾಡು ಅಂದಾಜು ಪಟ್ಟಿಯಲ್ಲಿನ ಅಂಶಗಳ ಅವಶ್ಯಕತೆಯ ಬಗ್ಗೆ ಮುಖ್ಯ ಅಭಿಯಂತರರು (ಯಲಹಂಕ)ರವರ ಸ್ಥಳ ತಪಾಸಣಾ ವರದಿ ಹಾಗೂ ಕಾಮಗಾರಿಯ ಅವಶ್ಯಕತೆಯ ಸಂಬಂಧ ಛಾಯಾ ಚಿತ್ರಗಳು ಮತ್ತು ನಕ್ಷೆ ಕಡತದಲ್ಲಿ ಲಭ್ಯವಿಲ್ಲ. • ಸದರಿ ಕಾಮಗಾರಿಗೆ ಕಾಲಾವಧಿ ವಿಸ್ತರಣೆಗೆ ಅನುಮೋದನೆ ಕೋರಿದ್ದು, ಸದರಿ ಕಾಲ ವಿಳಂಬಕ್ಕೆ ದಾಸರಹಳ್ಳಿ, ವಾಚೇನಹಳ್ಳಿ, ಥಣಿಸಂದ್ರ, ಬೊಕ್ಕನಹಳ್ಳಿ, ತಿರುಮೇನಹಳ್ಳಿ, ಕಟ್ಟಿಗೇನಹಳ್ಳಿ, ಶ್ರೀನಿವಾಸಪುರ, ಬೆಳ್ಳಹಳ್ಳಿ ಮತ್ತು 110 ಹಳ್ಳಿಗಳ ವ್ಯಾಪ್ತಿಯಲ್ಲಿದ್ದು, ಸದರಿ ಹಳ್ಳಿಗಳಲ್ಲಿ BWSSB ವತಿಯಿಂದ ಕುಡಿಯುವ ನೀರಿನ ಮತ್ತು ಒಳಚರಂಡಿ ಮತ್ತುಕೊಳವೆಗಳನ್ನು ಅಳವಡಿಸುವ ಮತ್ತು ಕಾಮಗಾರಿ ಅನಷ್ಟಾನಗೊಳ್ಳದಿರುವುದರಿಂದ ಕಾಲ ವಿಳಂಬವಾಗಿರುವುದಾಗಿ ವರದಿಸಿದ್ದು, ಆದರೆ ಕಾಲವಿಳಂಬದ ಸಂಬಂಧ ಕಾರ್ಯಪಾಲಕ ಅಭಿಯಂತರರು ಗುತ್ತಿಗೆದಾರರಿಗೆ ನೀಡಿರುವ ನೋಟಿಸ್ ಪ್ರತಿಗಳಾಗಲೀ

ಪು.ತಿ.ನೋ

ವಿಷಯ : Borewell in ward No-65 & 66 Byatarayanapura

ಪುಟದ ಸಂಖ್ಯೆ — 6 —

ಕಡತದ ಸಂಖ್ಯೆ CE/TUC/EE4/237/2020-21

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಅಥವಾ ಗುತ್ತಿಗೆದಾರರು ಕಾರ್ಯಪಾಲಕ ಅಭಿಯಂತರರಿಗೆ ಕಾಮಗಾರಿ ಸ್ಥಳಗಳನ್ನು ಹಸ್ತಾಂತರಿಸುವಲ್ಲಿ ವಿಳಂಬ ಮಾಡಿರುವ ಸಂಬಂಧ ನೀಡಿರುವ ಮನವಿ ಪತ್ರಗಳಾಗಲೀ ಯಾವುದೇ ಮಾಹಿತಿ/ದಾಖಿಲಾತಿಗಳು ಕಡತದಲ್ಲಿ ಲಭ್ಯವಿಲ್ಲದಿರುವುದು ಹಾಗೂ BWSSB ಪತಿಯಿಂದ ಕುಡಿಯುವ ನೀರಿನ ಮತ್ತು ಒಳಚರಂಡಿ ಮತ್ತು ಕೊಳವೆಗಳನ್ನು ಅಳವಡಿಸುವ ಕಾಮಗಾರಿಗೆ ಪೂರಕವಾಗಿ ಯಾವುದೇ ಛಾಯಾ ಚಿತ್ರಗಳು ಸಹ ಕಡತದಲ್ಲಿ ಲಭ್ಯವಿರುವುದಿಲ್ಲ.

- ಮಾನ್ಯ ಆಯುಕ್ತರ ಆದೇಶದ ಸಂಖ್ಯೆ: ಮುಲೆಅ/ಪಿಆರ್/4415/18–19, ದಿನಾಂಕ:31.10.2018 ರಲ್ಲಿ ಹೊರಡಿಸಿರುವ ಆದೇಶದಂತೆ, ವಿಶೇಷ ಪ್ರಕರಣಗಳೆಂದು ಪರಿಗಣಿಸಿದ ಸಂದರ್ಭದಲ್ಲಿ ಸ್ಥಳ ಪರಿಶೀಲಿಸಿ ಕಾಮಗಾರಿ ಅವಶ್ಯಕತೆಯ ಬಗ್ಗೆ ಧೃಢೀಕರಿಸಿ Unblock ಗೆ ಮುಖ್ಯ ಅಭಿಯಂತರರು (ಯಲಹಂಕ) ರವರು ಶಿಫಾರಸ್ಸು ಮಾಡಬೇಕಿರುವುದರಿಂದ ಈ ಸಂಬಂಧ ಕಾರ್ಯಪಾಲಕ ಅಭಿಯಮತರರು (ಬ್ಯಾಟರಾಯನಪುರ)ರವರು ಜಂಟಿಯಾಗಿ ಸ್ಥಳ ತಪಾಸಣೆ ನಡೆಸಿ ಕಾಮಗಾರಿಯ ಅವಶ್ಯಕತೆಯ ಬಗ್ಗೆ ಧೃಡೀಕರಿಸಿ ಮುಖ್ಯ ಅಭಿಯಂತರರ ಅನುಮೋದನೆ ಹಾಗೂ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿರುತ್ತದೆ.

122 ಮೇಲ್ಕಂಡ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, ಪ್ರಶ್ನಿತ ಕಾಮಗಾರಿಗೆ ಸಂಬಂಧಿಸಿದಂತೆ, ಮೇಲೆ ವಿವರಿಸಿರುವ ಎಲ್ಲಾ ಅಂಶಗಳನ್ನು ಸರಿಪಡಿಸಿಕೊಂಡು, ಸರಿಪಡಿಸಿಕೊಂಡಿರುವ ಬಗ್ಗೆ ಮುಖ್ಯ ಅಭಿಯಂತರು ರವರ ಅನುಮೋದನೆ ಪಡೆದು ಡಿ–ಪ್ರೀಜ್ ಗೆ ಮರು ಪ್ರಸ್ತಾವನೆಯ ಸಲ್ಲಿಸಲು ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ)ರವರಿಗೆ ಸೂಚಿಸಬಹುದಾಗಿದ್ದು, ಆದೇಶಕ್ಕಾಗಿ ಸಲ್ಲಿಸಿದೆ.

17/08/2020

ಕಾರ್ಯಪಾಲಕ ಅಭಿಯಂತರರು
ತಾಂತ್ರಿಕ ಮತ್ತು ಜಾಗೃತ ಕೋಶ

ಮುಖ್ಯ ಅಭಿಯಂತರರು (ಟಿವಿಸಿಸಿ)

123 ಕಂಡಿಕೆ (120)ರಿಂದ (122)ವರೆಗಿನ ವರದಿಯನ್ನು ಅವಗಾಹನೆಗೆ ತರುತ್ತಾ, ಕಂಡಿಕೆ (122)ರಲ್ಲಿ ಕಾರ್ಯಪಾಲಕ ಅಭಿಯಂತರರು (ಟಿವಿಸಿಸಿ)ರವರು ಸಲ್ಲಿಸಿರುವ ವರದಿಯಂತೆ ಕ್ರಮವಹಿಸಲು ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ)ರವರಿಗೆ ಸೂಚಿಸಬಹುದಾಗಿರುತ್ತದೆ.

124 ಮೇಲಿನ ವರದಿಯನ್ನು ಅವಗಾಹನೆಗೆ ಸಲ್ಲಿಸಿದೆ.

ಮುಖ್ಯ ಅಭಿಯಂತರರು
(ಟಿವಿಸಿಸಿ))

17/8/20

125 ವಿಶೇಷ ಆಯುಕ್ತರು(ಪಶ್ಚಿಮ) ಕಛೇರಿ
ಮುಖ್ಯ
414
20 AUG 2020
18/8/20
C6 (Yelhanka)
ಪಿ.ಆರ್.ಯಲಹಂಕ ವಲಯ.

ಸಂ 1089
18/8/2020

ಪಿ.ಆರ್.ಯಲಹಂಕ ವಲಯ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ 07

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸಂಖ್ಯೆ:1063
ದಿನಾಂಕ: 30/3/18
P6

ಕೆ.ಬಿ.ಗಿ.ಪ (ಬ್ಯಾ-ಪ್ರೀ)
ಕ್ರಿ ಪಟ್ಟಿಗೆ ಅನುಗ
ಮಾಡಿಸಿ ಅಮೃತ್ ಯೋಜನೆಯ
30/03

<u>ಮಂಡಿಸಿದೆ.</u>

ಕಂಡಿಕೆ (120) ರಿಂದ (122) ರಲ್ಲಿ ಕಾ.ಪಾ.ಅ ತಾಂತ್ರಿಕ ಮತ್ತುಜಾಗೃತಿ ಕೋಶ ರವರು ಸದರಿ ಕಾಮಗಾರಿಗೆ ಸಂಬಂದಿಸಿದಂತೆ ಕಂಡಿಕೆ (121) ರಲ್ಲಿ ವಿವರಿಸಿರುವ 5 ಅಂಶಗಳಿಗೆ ವರದಿಯನ್ನು ಸಲ್ಲಿಸಲು ಹಾಗೂ ಮುಖ್ಯ ಅಭಿಯಂತರರ ಅನುಮೋದನೆ ಪಡೆದು ಡಿ-ಫ್ರೀಜ್‌ಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕಾ.ಪಾ.ಅ ಬ್ಯಾಟರಾಯನಪುರ ವಿಭಾಗರವರಿಗೆ ಸೂಚಿಸಿರುತ್ತಾರೆ.

ಕಂಡಿಕೆ (121) ರಲ್ಲಿಕೋರಿರುವ ಅಂಶಗಳಿಗೆ ಸಂಬಂದಿಸಿದಂತೆ ಮಾಹಿತಿ ಈ ಕೆಳಕಂಡಂತಿವೆ.

- M/s Aishwarya Infrastructure and Developeres. Pro. R Chandru ರವರಿಗೆ ಕಾ.ಪಾ.ಅ ಬ್ಯಾಟರಾಯನಪುರ ವಿಭಾಗರವರು ಕಾರ್ಯಾದೇಶ ಸಂಖ್ಯೆ: BBMP/EE/BTP/WO/178/2016-17Dated: 03.03.2017ರಲ್ಲಿ ಕಾರ್ಯಾದೆಶವನ್ನು ನೀಡಿದ್ದು, ಈ ಕಾಮಗಾರಿಗೆ ಪೂರ್ಣಗೊಳಿಸಲು 365 ದಿನಗಳ ಕಾಲಾವಕಾಶ ನೀಡಿರುತ್ತಾರೆ. ಸದರಿ ಕಾಮಗಾರಿಯ ಅಂದಾಜು ಮೊತ್ತರೂ 760.0 ಲಕ್ಷಗಳಾಗಿದ್ದು ಕಾಮಗಾರಿ ಸಂಖೇತ 005-16-000038 ವಿದ್ದು ಅನುಮೊದಿತ ಟೆಂಡರ್ ಮೊತ್ತರೂ 6,67,54,480.00/- (ಶೇ 5.1% Below) ಗಳಾಗಿರುತ್ತದೆ. ಈ ಕಾಮಗಾರಿಯಲ್ಲಿ ವಾರ್ಡ್ ನಂ 05 ಕ್ಕೆ ಸಂಬಂದಿಸಿದ 20 ಹಾಗೂ ವಾರ್ಡ್ ನಂ 06 ಕ್ಕೆ ಸಂಬಂದಿಸಿದ 15 ಕಾಮಗಾರಿಗಳು, ಒಟ್ಟು 35 ಕಾಮಗಾರಿಗಳಿರುತ್ತವೆ. ಅದರ ಪೈಕಿ ಸದರಿ ಗುತ್ತಿಗೆದಾರರು ವಾರ್ಡ್ ನಂ 05 ರಲ್ಲಿ16 ಹಾಗೂ ವಾರ್ಡ್ ನಂ 06 ರಲ್ಲಿ 8 ಒಟ್ಟು 24 ಕಾಮಗಾರಿಗಳು ಒಂದು ವರ್ಷದ ಹಿಂದೆ ಪೂರ್ಣಗೊಳಿಸಿದ್ದು ಭೌತಿಕವಾಗಿ ಶೇ 68.57% ನಿರ್ವಹಿಸಲಾಗಿದೆ. ತದನಂತರ BWSSB ರವರು ವಾರ್ಡ್ ನಂ 05 ಹಗೂ 06 ರಲ್ಲಿ ಹೊಸದಾಗಿ ಕಾವೇರಿ ಹಾಗೂ ಒಳಚರಂಡಿಯ ಕೂಳವೆಗಳನ್ನು ಅಳವಡಿಸುವ ಕಾಮಗಾರಿ ಪ್ರಾರಂಬಿಸಿರುವುದರಿಂದ ರಸ್ತೆ ಅಭಿವೃದ್ದಿ ಹಾಗೂ ಡಾಂಬರೀಕರಣ ಕಾಮಗಾರಿಗಳು BWSSB ರವರ ಕಾಮಗಾರಿ ಪೂರ್ಣಗೂಳ್ಳುವವರೆಗು ಸ್ಥಗಿತಗೂಳಿಸಲು ಮಾನ್ಯ ಶಾಸಕರು ಬ್ಯಾಟರಾಯನಪುಂ ವಿಧಾನಸಭಾ ಕ್ಷೇತ್ರರವರು

127

ವಿಷಯ :

ಪುಟದ ಸಂಖ್ಯೆ 05

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಪ್ಪಣಿಗಳು ಮತ್ತು ಆಜ್ಞೆಗಳು
	ಮೌಖಿಕವಾಗಿ ಸೂಚಿಸಿರುವಂತೆ ಉಳಿದಿರುವ ಕಾಮಗಾರಿಗಳು ಸ್ಥಗಿತಗೊಳಿಸಲಾಗಿತ್ತು. BWSSB ರವರು ಕಾವೇರಿ ಹಾಗೂ ಒಳಚರಂಡಿ ಕೊಳವೆ ಅಳವಡಿಸಿ ಕಾಮಗಾರಿ ಪೂರ್ಣಗೊಳಿಸಿ ರಸ್ತೆಅಭಿವೃದ್ಧಿ ಪಡಿಸಲು ರಸ್ತೆಗಳನ್ನು ಹಂತ ಹಂತವಾಗಿ ಬಿಟ್ಟುಕೊಟ್ಟಿರುವುದರಿಂದ ಬಾಕಿ ಇರುವ ಕಾಮಗಾರಿಗಳನ್ನು ದಿನಾಂಕ 22.05.2020ರಿಂದ ಪ್ರಾರಂಬಿಸಲಾಗಿದೆ.
	• ಪ್ರಶ್ನಿತ ಕಾಮಗಾರಿಯನ್ನು ನಿರ್ವಹಿಸುವ ಮುನ್ನಕಾಮಗಾರಿಯನ್ನು ನಿರ್ವಹಿಸಲು ಉದ್ದೇಶವಿರುವ ಸ್ಥಳಗಳ ಛಾಯಚಿತ್ರಗಳನ್ನು ಕಡತದಲ್ಲಿ ಲಗತ್ತಿಸಲಾಗಿದೆ.
128	• ಪ್ರಶ್ನಿತ ಕಾಮಗಾರಿಗಳ ಸ್ಥಳದ ಅವಶ್ಯಕತೆ ಅನುಗುಣವಾಗಿ ಅಂದಾಜುಪಟ್ಟಿ ಮಾರ್ಪಾಡಿಸುವುದು ಅವಶ್ಯಕವಾಗಿರುವದರಿಂದ ಮುಖ್ಯ ಅಭಿಯಂತರರು ಯಲಹಂಕ ವಲಯರವರು ದಿನಾಂಕ 26.06.2020 ರಂದುಸ್ಥಳ ತಪಾಸಣೆಮಾಡಿ ನೀಡಿರುವವರದಿ ಹಾಗೂ ಕಾಮಗಾರಿಯ ಅವಶ್ಯಕತೆ ಬಗ್ಗೆ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗರವರೊಂದಿಗೆ ಸ್ಥಳ ತಪಾಸಣೆ ವರದಿ ಕಡತದಲ್ಲಿ ಲಗತ್ತಿಸಲಾಗಿದೆ. • ಗುತ್ತಿಗೆದಾರರುಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗರವರಿಗೆ ಕಾಲ ವಿಳಂಬದ ಬಗ್ಗೆ ನೀಡಿರುವ ಅರ್ಜಿಯ ಪ್ರತಿಯನ್ನು ಕಡತದಲ್ಲಿ ಲಗತ್ತಿಸಲಾಗಿದೆ. • ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ ಮುಲೆಅ/ಪಿಆರ್/4415/18-19 ದಿನಾಂಕ31-01-2018 ರಲ್ಲಿ ನೀಡಿರುವ ನಿರ್ದೇಶನದಂತೆ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗರವರು ಜಂಟಿಯಾಗಿ ಸ.ಕಾ.ಪ.ಅ ಹಾಗೂ ಸ.ಅ ರವರೊಂದಿಗೆ ಸ್ಥಳ ಪರಿಶೀಲಿಸಿ, ಕಾಮಗಾರಿಯನ್ನು ಡಿ-ಫ್ರೀಜ್ ಮಾಡಲು ಪ್ರಸ್ತಾವನೆಯನ್ನು ಕಳುಹಿಸಲು ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರಿಂದ ಅನುಮೂದನೆ ಪಡೆದಕಡತದ ಪ್ರತಿ ಲಗತ್ತಿಸಲಾಗಿದೆ.
129	ಕಂಡಿಕೆ(12) ರಿಂದ (12) ರವಗಿನ ಟಿ.ವಿ.ಸಿ.ಸಿ ಕೋರಿರುವ ಹಾಗೂ ವರದಿಸಿರುವ ಅಂಶಗಳಿಗೆ ಸಂಬಂದಿಸಿದಂತೆ ಕಂಡಿಕೆ (12) ರಿಂದ (12) ರವೆರೆಗೆ ಅಧಾರಯುತ ಧಾಖಿಲಾತಿಗಳೊಂದಿಗೆ ವರದಿಯು ಸಲ್ಲಿಸುತ್ತಾ, ಈಗಾಗಲೇ ಭಾಗಶಃ ಭಾಗದ ಕಾಮಗಾರಿಯನ್ನು ಕೈಗೆತ್ತಿಕೊಂಡು ಕಾಮಾಗಾರಿ ಪ್ರಗತಿಯಲ್ಲಿದ್ದು, ಉಳಿದ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಿರುವ ರಸ್ತೆಗಳು BWSSB ವತಿಯಿಂದರಸ್ತೆ ಅಗೆತಗಳಾಗಿದು, ಸದರಿ ರಸ್ತೆಗಳನ್ನು ಸರಿಪಡಿಸುವುದು ಅವಶ್ಯಕವಾಗಿರುವುದಾಗಿ ಮಾನ್ಯ ಶಾಸಕರು ತಿಳಿಸಿರುವಂತೆ ಮತ್ತು ಮುಖ್ಯ ಅಭಿಯಂತರರ (ಯ.ವ) ರವರ ನಿರ್ದೇಶದಂತೆ ಮಾರ್ಪಾಡು ಅಂದಾಜು ಪಟ್ಟಿಯನ್ನುರೂ. 6,67,33,872.00 ಗಳಿಗೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ 07

..... ಕಡತದ ಸಂಖ್ಯೆ AEE/ಹಿಬಿ/ಕೆಸಗಾ:27/20-21

3/8/2020

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ತಯಾರಿಸಿದ್ದು, ಸದರಿ ಮಾರ್ಪಾಡು ಅಂದಾಜು ಪಟ್ಟಿಯ ಮೊತ್ತಟೆಂಡರ್ ಅನುಮೋದಿತ ಮೊತ್ತದ ಒಳಗಿರುವುದರಿಂದ ಮತ್ತು ಇದರಿಂದ ಪಾಲಿಕೆಗೆ ಯಾವುದೆ ಅರ್ಥಿಕ ಹೊರೆಯಾಗದಿರುವದರಿಂದ ಸದರಿ ಮಾರ್ಪಾಡುಅಂದಾಜು ಪಟ್ಟಿಗೆಅನುಮೊದನೆ ಪಡೆಯಲು, ಕಾಲಾವಧಿ ವಿಸ್ತರಣೆ ನೀಡಲು ಹಾಗೂ ಕಾಮಗಾರಿಜಾಬ್ ಸಂಖ್ಯೆ: 005-16-000038 ಅನ್ನುಡೀ-ಫ್ರೀಜ್ ಮಾಡಲು ಮಾನ್ಯಅಯುಕ್ತರಅನುಮೊದನೆಗಾಗಿ ಸಲ್ಲಿಸುವಅದೇಶಕ್ಕಾಗಿ ಸಲ್ಲಿಸಿದೆ.

31/08/2020

ಸಹಾಯಕಅಭಿಯಂತರರು ವಾರ್ಡ್ ನಂ.05

ಸಹಾಯಕಅಭಿಯಂತರರು ವಾರ್ಡ್ ನಂ.06

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬ್ಯಾಟರಾಯನಪುರ ಉಪವಿಭಾಗ

ಕಾರ್ಯಪಾಲಕ ಅಭಿಯಂತರರು(ಬ್ಯಾ.ವಿ)

ಕಂಡಿಕೆ(13) ರಿಂದ (13) ರವರೆಗಿನ ಟಿ.ವಿ.ಸಿ.ಸಿ ಕೋರಿರುವ ಹಾಗೂ ವರದಿಸಿರುವ ಅಂಶಗಳಿಗೆ ಸಂಬಂಧಿಸಿದಂತೆ ಕಂಡಿಕೆ (13) ರಿಂದ (18) ರವರೆಅಧಾರಯುತ ಧಾಖಲಾತಿಗಳೊಂದಿಗೆ ವರದಿಯು ಸಲ್ಲಿಸುತ್ತಾ, ಈ ಕೆಳಕಂಡ ಅಂಶಗಳಿಗೆ ಅನುಮೊದನೆಕೊರಿದೆ.

- ✓ ಸದರಿ ಕಾಮಗಾರಿಯನ್ನು ಉದೇತಿಸಿರುವ ರಸ್ತೆಗಳ ಗ್ರಾಮಗಳು 110 ಹಳ್ಳಿಯ ವ್ಯಾಪ್ತಿಗೆ ಒಳಪಟ್ಟಿದ್ದು BWSSBವತಿಯಿಂದಕಾವೇರಿ ಹಾಗೂ ಒಳಚರಂಡಿ ಕೊಳವೆಗಳನ್ನು ಅಳವಡಿಸುವ ಕಾಮಗಾರಿಯು ವಿಳಂಬವಾಗಿದ್ದು, ಸದರಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಮುಕ್ತಾಯಗೊಳಿಸಲು ವಿಳಂಬವಾಗಿರುವ ವಿಷಯವನ್ನು ಅವಗಾಹನೆಗೆ ತರುತ್ತಾ ಕಾಲ ವಿಳಂಬದ ಸಂಬಂದಕಾಲಾವಧಿ ವಿಸ್ತರಣೆ ನೀಡಲು ಕೊರಿದೆ.
- ✓ ಸದರಿಕಾಮಗಾರಿಯು ಪ್ರಗತಿಯಲ್ಲಿದ್ದು, BWSSBವತಿಯಿಂದರಸ್ತೆ ಅಗೆತಗಳಾಗಿರುವ ರಸ್ತೆಗಳನ್ನು ಅವಶ್ಯಕವಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಸರಿಪಡಿಸಲು ಮಾನ್ಯ ಶಾಸಕರು ತಿಳಿಸಿರುವಂತೆ ಮತ್ತು ಮುಖ್ಯಅಭಿಯಂತರರ ಸ್ಥಳ ತಪಾಸಣೆ ಸಮಯದಲ್ಲಿ ನಿರ್ದೇಸಿಯವಂತೆ ಮಾರ್ಪಾಡು ಅಂದಾಜು ಪಟ್ಟಿಯರೂ. 6,67,33,872.00 ಗಳಿಗೆ ತಯಾರಿಸಿದ್ದು, ಸದರಿ ಮಾರ್ಪಾಡು ಅಂದಾಜು ಪಟ್ಟಿಯ ಮೊತ್ತ ಟೆಂಡರ್ ಅನುಮೋದಿತ ಮೊತ್ತದ ಒಳಗಿರುವುದರಿಂದ ಮತ್ತುಇದರಿಂದ ಪಾಲಿಕೆಗೆ ಯಾವುದೆಅರ್ಥಿಕ ಹೊರೆಯಾಗದಿರುವದರಿಂದ ನಿಯಮಾನುಸಾರ ತಯಾರಿಸಲಾಗಿರುವ ಮಾರ್ಪಾಡು ಅಂದಾಜು ಪಟ್ಟಿಹಾಗೂ Workslipಗೆ ಅನುಮೊದನೆಕೊರಿದೆ.
- ✓ ಪ್ರಸ್ತುತ ಸದರಿ ಕಾಮಗಾರಿಯು ಫ್ರೀಜ್ಆಗಿದ್ದು ಮಾನ್ಯ ಶಾಸಕರು ಸದರಿ ಕಾಮಗಾರಿಯನ್ನು ಕೂಡಲೆ ಕೈಗೆತ್ತಿಕೊಳ್ಳಲು ಸೂಚಿಸಿರುವದರಿಂದ, ಸಾರ್ವಜನಿಕರ ಮತ್ತು ಸಂಚಾರದ ಹಿತದೃಷ್ಟಿಯಿಂದ ಹಾಗೂ ಸದರಿ ಕಾಮಗಾರಿಯು ಪ್ರಗತಿಯಲ್ಲಿರುವದರಿಂದ ಕಾಮಗಾರಿಯನ್ನು ಕೈಗೆತ್ತಿಕೊಂಡು ಮುಕ್ತಾಯಗೊಳಿಸುವುದು ಅವಶ್ಯಕವಾಗಿದ್ದು ಕಾಮಗಾರಿಜಾಬ್ ಸಂಖ್ಯೆ: 005-16-000038 ಅನ್ನುಡೀ-ಫ್ರೀಜ್ ಮಾಡಲುಕೊರಿದೆ.

ಮೇಲ್ಕಂಡ ಅಂಶಗಳಿಗೆ ಮಾನ್ಯ ಅಯುಕ್ತರ ಅನುಮೊದನೆಗಾಗಿ ಪ್ರಸ್ತಾವನೆ ಸಲ್ಲಿಸಲು ಅದೇಶಕ್ಕಾಗಿ

01/09

ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು-560092.

ಮುಖ್ಯಅಭಿಯಂತರರು (ಯ.ವ)

ಮುಖ್ಯ ಅಭಿಯಂತರರ ಕಛೇರಿ
466
11 SEP 2020
132
ಬಿ.ಬಿ.ಎಂ.ಪಿ.ಯಲಹಂಕ ವಲಯ.

ವಿಷಯ :

ಪುಟದ ಸಂಖ್ಯೆ 10

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

133)

ಕಂಡಿಕೆ 120 ರಿಂದ 123ರವರೆಗಿನ ಮುಖ್ಯ ಅಭಿಯಂತರರು ಟಿವಿಸಿಸಿರವರ ಸೂಚಿಸಿರುವ ನ್ಯೂನ್ಯತೆಗಳಿಗೆ ಕಂಡಿಕೆ 130ರಲ್ಲಿ ಕಾರ್ಯಪಾಲಕ ಅಭಿಯಂತರರು ಅನುಸರಣಾ ವರದಿಯನ್ನು ಸಲ್ಲಿಸಿದ್ದು ಪ್ರಸ್ತಾಪಿತ ಕಾಮಗಾರಿ ಕೈಗೊಳ್ಳುವ ಪ್ರದೇಶವು 110 ಹಳ್ಳಿಗಳ ವ್ಯಾಪ್ತಿಗೆ ಒಳಪಡುವುದರಿಂದ ಹಾಗೂ ಬಿಡಬ್ಲ್ಯೂಎಸ್ಎಸ್ ವತಿಯಿಂದ ರಸ್ತೆ ಅಗೆತಗಳಾಗಿರುವ ರಸ್ತೆಗಳನ್ನು ಅವಶ್ಯಕವಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಸರಿಪಡಿಸಲು ಮಾನ್ಯ ಶಾಸಕರು ತಿಳಿಸಿರುವಂತೆ ಸದರಿ ಅಂಶಗಳನ್ನು ಪರಿಗಣಿಸಿ, ಮಾರ್ಪಾಡು ಅಂದಾಜುಪಟ್ಟಿ ಹಾಗೂ ವರ್ಕ್‌ಸ್ಲಿಪ್ ಅನುಮೋದನೆ ಕೋರಿ ಮಾನ್ಯ ಆಯುಕ್ತರವರ ಅನುಮೋದನೆಗಾಗಿ ಸಲ್ಲಿಸಿದ್ದು ತಮ್ಮ ಮುಂದಿನ ಆದೇಶಕ್ಕೆ ಸಲ್ಲಿಸಿದೆ.

ಮು.ತಾ.ಲೆ.(ಯು)ಸಿಬಿ

134) ಮು.ಲೆ(ಯು) ಕಂಡಿಕೆ (127) ರಿಂದ (133) ರವರೆಗೆ ವಿವರಿಸಿರುವಂತೆ ಮೇಲ್ಕಂಡ ನಿಬಂಧನೆಗಳಿಗೆ ಮಾರ್ಪಾಡು ಕೈಗೊಳ್ಳಬೇಕಿದ್ದು, ಮತ್ತು ವರ್ಕ್‌ಸ್ಲಿಪ್‌ಗೆ ಅನುಮೋದನೆಗೆ ಹಸ್ತಪ್ರತಿ ಪ್ರಾಥಮಿಕರವರ ಮುಂದೆ. ಮುಂದಿನ ಆದೇಶಕ್ಕೆ ಸಲ್ಲಿಸಿದೆ.

ಮುಖ್ಯ ಅಭಿಯಂತರರು (ಯು.ಎ)
14/9

ಮಾನ್ಯ ವಲಯ ಆಯುಕ್ತರು (ಯು.ಎ)

ಕಂಡಿಕೆ 133 ರಂತೆ ಮಾರ್ಪಾಡು ಕ್ರಮಕ್ಕಾಗಿ

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮು.ಅ(ಆ&ಪಿ/ಮಾ) ಸ್ವೀಕೃತಿ ಸಂ. 1488 ದಿನಾಂಕ 21/9/2020

21/9/20

ವಿಶೇಷ ಆಯುಕ್ತರು (ಆಸ್ತಿಗಳು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

136) CE/TVCC]

ಮು.ಅ(ಆ & ಪಿ.ಪಿ.ಇ.ಡಿ) ರವರ ಕಛೇರಿ
ಬೃ.ಬೆಂ.ಮ.ಪಾ
ಮಾನ್ಯ ಸ್ವೀಕೃತಿ ಸಂಖ್ಯೆ: 6/4/11/2020.
ದಿನಾಂಕ: 22/9/2020.21

ಮುಖ್ಯ ಅಭಿಯಂತರರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

22/9/2020

EE

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
	ಕಂಡಿಕೆ (125) ರಿಂದ (134) ರವರೆಗಿನ ವರದಿಯನ್ನು ಅವಗಾಹನೆಗೆ ಸಲ್ಲಿಸಿದೆ.
(132)	ಈ ಕಛೇರಿಯಿಂದ ಕಂಡಿಕೆ (120) ರಿಂದ (122)ರವರೆಗಿನ ವರದಿಗೆ ಸಂಬಂಧಿಸಿದಂತೆ, ಕಂಡಿಕೆ (127)ರಿಂದ (134)ರವರೆಗಿನ ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ) ಹಾಗೂ ಮುಖ್ಯ ಅಭಿಯಂತರರು (ಯಲಹಂಕ)ರವರು ಸಲ್ಲಿಸಿರುವ ಪಾಲನಾ ವರದಿಯನ್ನು ವಿಶೇಷ ಆಯುಕ್ತರು (ಆಸ್ತಿಗಳು) ರವರು "ಮುಂದಿನ ಕ್ರಮಕ್ಕಾಗಿ" ಎಂದು ಸೂಚಿಸಿರುವುದನ್ವಯ, ಸದರಿ ಕಾಮಗಾರಿಯ ಡಿ–ಫ್ರೀಜ್ ಪ್ರಸ್ತಾವನೆಯ ಪಾಲನಾ ವರದಿಯನ್ನು ಪರಿಶೀಲಿಸಲಾಗಿ, ಈ ಕೆಳಕಂಡಂತೆ ವರದಿಸಿದೆ.
(133)	• ಈ ಕಛೇರಿಯಿಂದ ಕಂಡಿಕೆ (120) ರಿಂದ (122)ರವರೆಗೆ ವರದಿಸಿರುವ ಅಂಶಗಳಿಗೆ ಸಂಬಂಧಿಸಿದಂತೆ, ಕಂಡಿಕೆ (127) ರಿಂದ (131)ರವರೆಗೆ ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ) ರವರು ಸಲ್ಲಿಸಿರುವ ಪಾಲನಾ ವರದಿಯನ್ನು ಪರಿಗಣಿಸಬಹುದಾಗಿದ್ದರೂ ಸಹ ಡಿ–ಫ್ರಿಜ್ ಗೆ ಸಂಬಂಧಿಸಿದಂತೆ, ಮಾನ್ಯ ಆಯುಕ್ತರ ಆದೇಶದ ಸಂಖ್ಯೆ: ಮುಲೆಅ/ಪಿಆರ್/4415/18–19, ದಿನಾಂಕ:31.10.2018 ರಲ್ಲಿ ಹೊರಡಿಸಿರುವ ಆದೇಶದಂತೆ, ವಿಶೇಷ ಪ್ರಕರಣಗಳೆಂದು ಪರಿಗಣಿಸಿದ ಸಂದರ್ಭದಲ್ಲಿ ಸ್ಥಳ ಪರಿಶೀಲಿಸಿ ಕಾಮಗಾರಿ ಅವಶ್ಯಕತೆಯ ಬಗ್ಗೆ ಧೃಢೀಕರಿಸಿ Unblock ಗೆ ಮುಖ್ಯ ಅಭಿಯಂತರರು (ಯಲಹಂಕ) ರವರು ಶಿಫಾರಸ್ಸು ಮಾಡಬೇಕಿರುತ್ತದೆ. ಆದರೆ ಸದರಿ ಪ್ರಕರಣದಲ್ಲಿ ಕಾರ್ಯಪಾಲಕ ಅಭಿಯಂತರರು ಕಾಮಗಾರಿಯ ಕಾಲ ವಿಳಂಬಕ್ಕೆ, ವರ್ಕ್‌ಸ್ಲಿಪ್ ಹಾಗೂ ಮಾರ್ಪಾಡು ಅಂದಾಜುಪಟ್ಟಿಗೆ ಹಾಗೂ ಡಿ–ಫ್ರೀಜ್ ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಕೋರಿ ಮುಖ್ಯ ಅಭಿಯಂತರರು (ಯಲಹಂಕ)ರವರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಆದರೆ ಕಂಡಿಕೆ (134)ರಲ್ಲಿ ಮುಖ್ಯ ಅಭಿಯಂತರರು(ಯಲಹಂಕ)ರವರು ಸದರಿ ಕಾಮಗಾರಿಯ ಮಾರ್ಪಾಡು ಅಂದಾಜುಪಟ್ಟಿ ಮತ್ತು ವರ್ಕ್‌ಸ್ಲಿಪ್ ಅನುಮೋದನೆಗೆ ಸಕ್ಷಮ ಪ್ರಾಧಿಕಾರದ ಮುಂದೆ ಮಂಡಿಸಲು ಮಾತ್ರ ಕೋರಿ, ಉಳಿದಂತೆ ಕಾಮಗಾರಿಯ ಕಾಲ ವಿಳಂಬಕ್ಕೆ ಅನುಮೋದನೆ ಹಾಗೂ ಡಿ–ಫೀಜ್ ಮಾಡಲು ಯಾವುದೇ ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸದಿರುವ ವಿಷಯವನ್ನು ಅವಗಾಹನೆಗೆ ಸಲ್ಲಿಸಿದೆ.
(134)	ಮೇಲ್ಕಂಡ ಅಂಶಗಳನ್ನು ಅವಗಾಹನೆಗೆ ತರುತ್ತಾ, ಪ್ರಶ್ನಿತ ಕಾಮಗಾರಿಗೆ ಸಂಬಂಧಿಸಿದಂತೆ, ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ) ರವರು ಕಾಮಗಾರಿಯ ಕಾಲ ವಿಳಂಬಕ್ಕೆ, ವರ್ಕ್‌ಸ್ಲಿಪ್ ಹಾಗೂ ಮಾರ್ಪಾಡು ಅಂದಾಜುಪಟ್ಟಿಗೆ ಹಾಗೂ ಡಿ–ಫ್ರೀಜ್ ಗೆ ಕೋರಿ ಮುಖ್ಯ ಅಭಿಯಂತರರು (ಯಲಹಂಕ)ರವರಿಗೆ ಪ್ರಸ್ತಾವನೆ ಸಲ್ಲಿಸಿದ್ದರೂ ಮುಖ್ಯ ಅಭಿಯಂತರರು(ಯಲಹಂಕ)ರವರು ಸದರಿ ಕಾಮಗಾರಿಯ ಮಾರ್ಪಾಡು ಅಂದಾಜುಪಟ್ಟಿ ಮತ್ತು ವರ್ಕ್‌ಸ್ಲಿಪ್ ಅನುಮೋದನೆಗೆ ಸಕ್ಷಮ ಪ್ರಾಧಿಕಾರದ ಮುಂದೆ ಮಂಡಿಸಲು ಮಾತ್ರ ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿದ್ದು, ಉಳಿದಂತೆ ಕಾಮಗಾರಿಯ ಕಾಲ ವಿಳಂಬಕ್ಕೆ ಅನುಮೋದನೆ ಹಾಗೂ ಡಿ–ಫೀಜ್ ಮಾಡಲು ಯಾವುದೇ ಶಿಫಾರಸ್ಸು ಮಾಡದಿರುವುದರಿಂದ ಮಾನ್ಯ ಆಯುಕ್ತರ ಆದೇಶದ ಸಂಖ್ಯೆ: ಮುಲೆಅ/ಪಿಆರ್/4415/18–19, ದಿನಾಂಕ:31.10.2018 ರಲ್ಲಿ ಹೊರಡಿಸಿರುವ ಆದೇಶದಂತೆ, ಸದರಿ ಕಾಮಗಾರಿಯ ಸ್ಥಳ ಪರಿಶೀಲಿಸಿ ಕಾಮಗಾರಿ ಅವಶ್ಯಕತೆಯ ಬಗ್ಗೆ ಧೃಢೀಕರಿಸಿ Unblock ಗೆ ಮುಖ್ಯ ಅಭಿಯಂತರರು (ಯಲಹಂಕ) ರವರ ಅನುಮೋದನೆ ಹಾಗೂ ಶಿಫಾರಸ್ಸಿನಂತೆ ನಿಯಮಾನುಸಾರ ಕ್ರಮವಹಿಸಬಹುದಾಗಿದ್ದು,

ವಿಷಯ : Borewells in Wards No. 05, 06 & 07 Byatarayanapura - 12 -

ಪುಟದ ಸಂಖ್ಯೆ .....

ಕಡತದ ಸಂಖ್ಯೆ CE(Tech)/64/HW/2020-21

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
	ಕ್ರಮ ವಹಿಸಲು ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ)ರವರಿಗೆ ಸೂಚಿಸಬಹುದಾಗಿರುತ್ತದೆ ಎಂದು ಅಭಿಪ್ರಾಯಿಸಿ ಕಡತವನ್ನು ಅವಗಾಹನೆಗೆ ಹಾಗೂ ಆದೇಶಕ್ಕಾಗಿ ಸಲ್ಲಿಸಿದೆ. Sathish Kumar ಕಾರ್ಯಪಾಲಕ ಅಭಿಯಂತರರು 29/09/2020 ತಾಂತ್ರಿಕ ಮತ್ತು ಜಾಗೃತ ಕೋಶ
	ಮುಖ್ಯ ಅಭಿಯಂತರರು (ಟಿವಿಸಿಸಿ)
1Hw	ಕಂಡಿಕೆ (137)ರಿಂದ (139)ವರೆಗಿನ ವರದಿಯನ್ನು ಅವಗಾಹನೆಗೆ ತರುತ್ತಾ, ಕಂಡಿಕೆ (139)ರಲ್ಲಿ ಕಾರ್ಯಪಾಲಕ ಅಭಿಯಂತರರು (ಟಿವಿಸಿಸಿ)ರವರು ಸಲ್ಲಿಸಿರುವ ವರದಿಯಂತೆ ಕ್ರಮವಹಿಸಲು ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ)ರವರಿಗೆ ಸೂಚಿಸಬಹುದಾಗಿರುತ್ತದೆ.
Hw	ಮೇಲಿನ ವರದಿಯನ್ನು ಅವಗಾಹನೆಗೆ ಸಲ್ಲಿಸಿದೆ. ಮುಖ್ಯ ಅಭಿಯಂತರರು 30/9/2020 (ಟಿವಿಸಿಸಿ))
141	ವಿಶೇಷ ಆಯುಕ್ತರು (ಪ್ರಾಜೆಕ್ಟ್) Respnd. Mep 6/10 Special Commissioner (Proje... ...Bangalore Mahanag...
142	CE (Yelahanka) ಮು.ಅ.(ಪ್ರಾಜ) 9/10 ಮುಖ್ಯ ಅಭಿಯಂತರರು ಬೃಹತ್ ಬೆಂ...

ವಿಶೇಷ ಆಯುಕ್ತರು ಬ.ಮ.ನ.ಪ. 30/9/2020 2152

ಮುಖ್ಯ ಅಭಿಯಂತರರ ಕಛೇರಿ 595 09 OCT 2020

ಸಂಖ್ಯೆ: 1493 ದಿನಾಂಕ: 12/10/20

Bill 12/10

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ 13

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
143	ಕಂಡಿಕೆ (141)ರಲ್ಲಿ ಮಾನ್ಯ ವಿಶೇಷ ಆಯುಕ್ತರು ರವರು ಸೂಚಿಸಿರುವಂತೆ ಹಾಗೂ ಕಂಡಿಕೆ (140)ರಲ್ಲಿ ಮಾನ್ಯ ಮುಖ್ಯ ಅಭಿಯಂತರರು, ಟಿವಿಸಿಸಿ ರವರು ಸಲ್ಲಿಸಿರುವ ವರದಿಯಂತೆ, ಆಧಾರಯುತ ದಾಖಲಾತಿಗಳೊಂದಿಗೆ ವರದಿಯನ್ನು ಸಲ್ಲಿಸುತ್ತಾ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ. ✓ ಸದರಿ ಕಾಮಗಾರಿಯನ್ನು ಉದ್ದೇಶಿಸಿರುವ ರಸ್ತೆಗಳ ಗ್ರಾಮಗಳು 110 ಹಳ್ಳಿಯ ವ್ಯಾಪ್ತಿಗೆ ಒಳಪಟ್ಟಿದ್ದು, ಬಿಡಬ್ಲ್ಯೂಎಸ್ಎಸ್ಬಿ ಪತಿಯಿಂದ ಕಾವೇರಿ ಹಾಗೂ ಒಳಚರಂಡಿ ಕೊಳವೆಗಳನ್ನು ಅಳವಡಿಸುವ ಕಾಮಗಾರಿಯು ವಿಳಂಬವಾಗಿದ್ದು, ಸದರಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಮುಕ್ತಾಯಗೊಳಿಸಲು ವಿಳಂಬವಾಗಿರುವ ವಿಷಯವನ್ನು ಅವಗಾಹನೆಗೆ ತರತ್ತಾ, ಕಾಲವಿಳಂಬದ ಸಂಬಂಧ ಕಾಲಾವಧಿ ವಿಸ್ತರಣೆ ನೀಡಲು ಕೋರಿದೆ. ✓ ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, ಬಿಡಬ್ಲ್ಯೂಎಸ್ಎಸ್ಬಿ ಪತಿಯಿಂದ ರಸ್ತೆ ಅಗೆತಗಳಾಗಿರುವ ರಸ್ತೆಗಳನ್ನು ಅವಶ್ಯಕವಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಸರಿಪಡಿಸಲು ಮಾನ್ಯ ಶಾಸಕರು ತಿಳಿಸಿರುವಂತೆ ಮತ್ತು ಮುಖ್ಯ ಅಭಿಯಂತರರು ಸ್ಥಳ ತಪಾಸಣೆ ಸಮಯದಲ್ಲಿ ನಿರ್ದೇಶಿರುವಂತೆ ಮಾರ್ಪಾಡು ಅಂದಾಜುಪಟ್ಟಿ ರೂ.6,67,33,872.00ಗಳಿಗೆ ತಯಾರಿಸಿದ್ದು, ಸದರಿ ಮಾರ್ಪಾಡು ಅಂದಾಜು ಪಟ್ಟಿಯ ಮೊತ್ತ ಟೆಂಡರ್ ಅನುಮೋದಿತ ಮೊತ್ತದ ಒಳಗಿರುವುದರಿಂದ ಮತ್ತು ಇದರಿಂದ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆಯಾಗದಿರುವುದರಿಂದ ನಿಯಮಾನುಸಾರ ತಯಾರಿಸಲಾಗಿರುವ ಮಾರ್ಪಾಡು ಅಂದಾಜುಪಟ್ಟಿ ಹಾಗೂ ವರ್ಕ್ಸ್ಲಿಪ್ಗೆ ಅನುಮೋದನೆ ಕೋರಿದೆ. ✓ ಪ್ರಸ್ತುತ ಸದರಿ ಕಾಮಗಾರಿಯು ಫ್ರೀಜ್ ಆಗಿದ್ದು, ಮಾನ್ಯ ಶಾಸಕರು ಸದರಿ ಕಾಮಗಾರಿಯನ್ನು ಕೂಡಲೇ ಕೈಗೆತ್ತಿಕೊಳ್ಳಲು ಸೂಚಿಸಿರುವುದರಿಂದ ಸಾರ್ವಜನಿಕರ ಮತ್ತು ಸಂಚಾರದ ಹಿತದೃಷ್ಟಿಯಿಂದ ಹಾಗೂ ಸದರಿ ಕಾಮಗಾರಿಯು ಪ್ರಗತಿಯಲ್ಲಿರುವುದರಿಂದ ಕಾಮಗಾರಿಯನ್ನು ಕೈಗೆತ್ತಿಕೊಂಡು ಮುಕ್ತಾಯಗೊಳಿಸುವುದು ಅವಶ್ಯಕವಾಗಿದ್ದು, ಕಾಮಗಾರಿ ಜಾಬ್ ಸಂಖ್ಯೆ:005-16-000038 ಅನ್ನು ಡೀ-ಫ್ರೀಜ್ ಮಾಡಲು ಕೋರಿದೆ. ಮೇಲ್ಕಂಡ ಅಂಶಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಕೋರಿ ಕಡತವನ್ನು ಮಂಡಿಸಿದೆ. 12/10 ಕಾರ್ಯಪಾಲಕ ಅಭಿಯಂತರರು ಬಾದರವಾಲಿಪೇಟೆ ವಿಭಾಗ ಯಲಹಂಕ ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು-560092.

ಪು.ತಿ.ನೋ

ವಿಷಯ :

ಪುಟದ ಸಂಖ್ಯೆ ..... 14 .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸಂಖ್ಯೆ:ಕ.ಆ.ಬ.ಪ್ರಾ.(ಅಡಿಕೆ) ರದ್ದು ಆಗ್ರಹ
ನಂ:ಕ.ಆ.ಬ.(ಅ)/ಸಿ.ಆ.ಸಿ/ 2020
ದಿನಾಂಕ :...19.11.2020.....

ಕಂಡಿಕೆ (139)ರಲ್ಲಿ ಮುಖ್ಯ ಅಭಿಯಂತರರು ಟಿವಿಸಿಸಿರವರು ಆಕ್ಷೇಪಿಸಿರುವ ಅಂಶಗಳಿಗೆ ಕಂಡಿಕೆ 145ರಿಂದ 147ರಲ್ಲಿ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗರವರು ವಿವರಣೆಯನ್ನು ನೀಡುತ್ತಾ, ಪ್ರಸ್ತಾಪಿತ ಕಾಮಗಾರಿಯು 110 ಹಳ್ಳಿಗಳ ವ್ಯಾಪ್ತಿಗೆ ಒಳಪಟ್ಟಿದ್ದು, ಬಿಡಬ್ಲ್ಯೂಎಸ್ಎಸ್ಬಿ ವತಿಯಿಂದ ಕಾವೇರಿ ಹಾಗೂ ಒಳಚರಂಡಿ ಕೊಳವೆಗಳನ್ನು ಅಳವಡಿಸುವ ಕಾಮಗಾರಿಯು ವಿಳಂಬವಾಗಿರುವುದರಿಂದ ಕಾಮಗಾರಿಯನ್ನು ಕೈಗೊಳ್ಳಲು ವಿಳಂಬವಾಗಿದ್ದು, ಕಾಲವಿಸ್ತರಣೆಯನ್ನು ನೀಡಲು ಅನುಮೋದನೆ ಹಾಗೂ ಅಂದಾಜುಪಟ್ಟಿಯಲ್ಲಿ ಮಂಜೂರಾದ ಪರಿಮಾಣಗಳಿಗಿಂತ ಕೆಲವು ಅಂಶಗಳು ಹೆಚ್ಚುವರಿ/ಕಡಿಮೆಯಾಗಿದ್ದು, ಮಾರ್ಪಾಡು ಅಂದಾಜು ಮೊತ್ತ ರೂ.6,67,33,872.00ಗಳಿಗೆ ತಯಾರಿಸಿದ್ದು, ಸದರಿ ಮಾರ್ಪಾಡು ಅಂದಾಜು ಪಟ್ಟಿಯ ಮೊತ್ತ ಟೆಂಡರ್ ಅನುಮೋದಿತ ಮೊತ್ತದ ಒಳಗಿರುವುದರಿಂದ ಮತ್ತು ಇದರಿಂದ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆಯಾಗದಿರುವುದರಿಂದ ನಿಯಮಾನುಸಾರ ತಯಾರಿಸಲಾಗಿರುವ ಮಾರ್ಪಾಡು ಅಂದಾಜುಪಟ್ಟಿ ಹಾಗೂ ವರ್ಕ್ಸ್ಲಿಪ್ಗೆ ಅನುಮೋದನೆ ಮತ್ತು ಕಾಮಗಾರಿ ಜಾಬ್ ಸಂಖ್ಯೆ:005-16-000038ಅನ್ನು ಡೀ-ಫ್ರೀಜ್ ಮಾಡಲು ಅನುಮೊದನೆ ಕೋರಿ ಕಡತವನ್ನು ಮಂಡಿಸಿದೆ.

ಮುಖ್ಯ ಅಭಿಯಂತರರು

144 ಮೊನ್ನೆ ವಲಯ ಆಯುಕ್ತರ (ಮಾ.ವ)
ಕಂಡಿಕೆ 137 ರಿಂದ 139 ರವರೆಗಿನ ಬಿ.ಎ.ಪಿ.ಸಿ ನೌಕರ
ಸಂಘಗಳಿಗೆ ಮೂಲಭೂತ ಕಾಮಗಾರಿಗಳ ಅಭಿಯಂತರರು
ಮಾಡಿದ ಮನವಿ ಅಭಿಯಂತರರು ವಿನಂತಿ ಮೇರಿಗೆ,
ಕಾಮಗಾರಿ ಕಾರ್ಯ ಪಂಚಿಗೆ ಡೀ-ಫ್ರೀಜ್ ಮಾಡಿಲು
ಕೋರಿರುತ್ತಾರೆ. ಈ ಪಂಚಾಗೆ ಪರಿಶೀಲಿಸಿ ಆನ್ಲೈನ್ ಕ್ರಿಯೆಗೆ

25/11/2020

145 ಮುಖ್ಯ ಅಭಿಯಂತರರು

146) CO (Fin)

ಕ.ಆ.ಬ/686/20-21
26-11-2020
(1+1 file)

26/11/2020

147)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ Improvement's to Roads, drain's and drilling borewell's in ward no 05 and Gyb. no. 7 Byrathiyanapura ಪುಟದ ಸಂಖ್ಯೆ 15

ಕಡತದ ಸಂಖ್ಯೆ CE(TUCC)/GL/686/2021

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
148	ಪ್ರಶ್ನಿತ ಪ್ರಕರಣಕ್ಕೆ ಸಂಬಂಧಿಸಿದಂತೆ, ಕಂಡಿಕೆ (145)ರಲ್ಲಿ ವಿಶೇಷ ಆಯುಕ್ತರು (ಆಡಳಿತ)ರವರು ಕಂಡಿಕೆ (137)ರಿಂದ (139)ರವರೆಗಿನ ಟಿವಿಸಿಸಿ ವರದಿಯ ಅಂಶಗಳಿಗೆ ಮೇಲಿನಂತೆ ಕಾರ್ಯಪಾಲಕ ಅಭಿತಯಂತರರು ಹಾಗೂ ಮುಖ್ಯ ಅಭಿಯಂತರರು ವಿವರಣೆ ನೀಡುತ್ತಾ, ಕಾಮಗಾರಿ ಜಾಬ್ ಸಂಖ್ಯೆ ಡಿ-ಫ್ರೀಜ್ ಮಾಡಲು ಕೋರಿರುತ್ತಾ, ಈ ಸಂಬಂಧ ಪರಿಶೀಲಿಸಿ ಅಗತ್ಯ ಕ್ರಮಕ್ಕಾಗಿ ಎಂದು ಆದೇಶಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಪ್ರಕರಣದ ಕಡತವನ್ನು ಪರಿಶೀಲಿಸಲಾಗಿ ಈ ಕೆಳಕಂಡಂತೆ ವರದಿಸಿದೆ. • ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಂಡಿಕೆ (118)ರಲ್ಲಿ ವಿಶೇಷ ಆಯುಕ್ತರು (ಆಸ್ತಿಗಳು)ರವರು ಪರಿಶೀಲಿಸಿ ಮಂಡಿಸಿ ಎಂದು ಆದೇಶಿಸಿರುವುದನ್ವಯ ಕಡತವನ್ನು ಅವಲೋಕಿಸಲಾಗಿ, ಕಂಡಿಕೆ (120)ರಿಂದ (124)ರವರೆಗೆ ವರದಿಯನ್ನು ಸಲ್ಲಿಸಿ ವರದಿಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳನ್ನು ಸರಿಪಡಿಸಿಕೊಂಡು, ಸರಿಪಡಿಸಿಕೊಂಡಿರುವ ಬಗ್ಗೆ ಮುಖ್ಯ ಅಭಿಯಂತರರು (ಯಲಹಂಕ)ರವರ ಅನುಮೋದನೆ ಪಡೆದು ಮರು ಪ್ರಸ್ತಾವನೆಯ ಸಲ್ಲಿಸಲು ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ)ರವರಿಗೆ ಸೂಚಿಸಲಾಗಿತ್ತು. • ತದನಂತರ ಕಂಡಿಕೆ (135)ರಲ್ಲಿ ವಿಶೇಷ ಆಯುಕ್ತರು (ಆಸ್ತಿಗಳು)ರವರು ಕಂಡಿಕೆ (133)ರಂತೆ ಮುಂದಿನ ಕ್ರಮಕ್ಕಾಗಿ ಎಂದು ಆದೇಶಿಸಿರುವ ಸಂಬಂಧ ಕಡತದ ಟಿಪ್ಪಣಿ ಹಾಳೆಗಳನ್ನು ಅವಲೋಕಿಸಲಾಗಿ, ಸಹಾಯಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ರವರು ಕಂಡಿಕೆ (127)ರಿಂದ (129)ರವರೆಗೆ, ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ)ರವರು ಕಂಡಿಕೆ (130)ರಿಂದ (131)ರವರೆಗೆ ವರದಿಯನ್ನು ಸಲ್ಲಿಸಿ ಪ್ರಶ್ನಿತ ಕಾಮಗಾರಿಗೆ ಕಾಲ ವಿಳಂಬಕ್ಕೆ ಕಾಲವಿಸ್ತರಣೆ, ವರ್ಕ್ ಸ್ಲಿಪ್ ಗೆ ಅನುಮೋದನೆ ಹಾಗೂ ಡಿ-ಫ್ರೀಜ್ ಮಾಡಲು ಕೋರಿದ್ದು, ಆದರೆ ಮುಖ್ಯ ಅಭಿಯಂತರರು (ಯಲಹಂಕ)ವಲಯ ರವರು ಕಂಡಿಕೆ (134)ರಲ್ಲಿ \ಪ್ರಶ್ನಿತ ಕಾಮಗಾರಿಗೆ ಮಾರ್ಪಾಡು ಅಂದಾಜು ಪಟ್ಟಿ ಮತ್ತು ವರ್ಕ್ ಸ್ಲಿಪ್ ಗೆ ಮಾತ್ರ ಅನುಮೋದನೆ ಕೋರಿ ಉಳಿದಂತೆ ಕಾಮಗಾರಿಯ ಕಾಲ ವಿಳಂಬಕ್ಕೆ ಅನುಮೋದನೆ ಹಾಗೂ ಡಿ-ಫೀಜ್ ಮಾಡಲು ಯಾವುದೇ ಶಿಫಾರಸ್ಸು ಮಾಡದಿರುವುದರಿಂದ ಮಾನ್ಯ ಆಯುಕ್ತರ ಆದೇಶದ ಸಂಖ್ಯೆ: ಮುಲೆಅ/ಪಿಆರ್/4415/18-19, ದಿನಾಂಕ:31.10.2018 ರಲ್ಲಿ ಹೊರಡಿಸಿರುವ ಆದೇಶದಂತೆ, ಸದರಿ ಕಾಮಗಾರಿಯ ಸ್ಥಳ ಪರಿಶೀಲಿಸಿ ಕಾಮಗಾರಿ ಅವಶ್ಯಕತೆಯ ಬಗ್ಗೆ ಧೃಢೀಕರಿಸಿ Unblock ಗೆ ಮುಖ್ಯ ಅಭಿಯಂತರರು (ಯಲಹಂಕ) ರವರ ಅನುಮೋದನೆ ಹಾಗೂ ಶಿಫಾರಸ್ಸಿನಂತೆ ನಿಯಮಾನುಸಾರ ಕ್ರಮವಹಿಸಬಹುದಾಗಿದ್ದು, ಕ್ರಮ ವಹಿಸಲು ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ)ರವರಿಗೆ ಮತ್ತೊಮ್ಮೆ ಸೂಚಿಸಲಾಗಿರುವ ವಿಷಯವನ್ನು ಅವಗಾಹನೆಗೆ ಸಲ್ಲಿಸಿದೆ. • ಪ್ರಸ್ತುತ ಕಂಡಿಕೆ (145)ರಲ್ಲಿ ಮಾನ್ಯ ವಲಯ ಆಯುಕ್ತರು ಯಮಹಂಕ ವಲಯ ರವರು ಕಂಡಿಕೆ (137)ರಿಂದ (139)ರವರೆಗಿನ ಟಿವಿಸಿಸಿ ವರದಿಯ ಅಂಶಗಳಿಗೆ ಮೇಲಿನಂತೆ ಕಾರ್ಯಪಾಲಕ ಅಭಿತಯಂತರರು ಹಾಗೂ ಮುಖ್ಯ ಅಭಿಯಂತರರು ವಿವರಣೆ ನೀಡುತ್ತಾ, ಕಾಮಗಾರಿ ಜಾಬ್ ಸಂಖ್ಯೆ ಡಿ-ಫ್ರೀಜ್ ಮಾಡಲು ಕೋರಿರುವ ಸಂಬಂಧ ಪರಿಶೀಲಿಸಿ ಅಗತ್ಯ ಕ್ರಮಕ್ಕಾಗಿ ಆದೇಶಿಸಿರುವುದನ್ವಯ ಕಡತದ ಟಿಪ್ಪಣಿ ಹಾಳೆಗಳನ್ನು ಅವಲೋಕಿಸಲಾಗಿ ಕಂಡಿಕೆ (144)ರಲ್ಲಿ ಮುಖ್ಯ ಅಭಿಯಂತರರು ಪ್ರಶ್ನಿತ ಕಾಮಗಾರಿಯ ಸ್ಥಳ ತಪಾಸಣೆ ನಡೆಸಿ, ಸ್ಥಳ ತಪಾಸಣಾ ವರದಿಯೊಂದಿಗೆ ಸದರಿ

ವಿಷಯ : Borewell & in ward No- 05 and 06. @ Byatarayanapura

ಪುಟದ ಸಂಖ್ಯೆ : - 16 -

ಕಡತದ ಸಂಖ್ಯೆ CE/ಸಾರಿ/ಮು.ಅ/686/20-21

ಪಂಕ್ತಿಯ ಸಂಖ್ಯೆ	ಟಪ್ಪಣಿಗಳು ಮತ್ತು ಆಜ್ಞೆಗಳು

ಕಾಮಗಾರಿಯ ಮಾರ್ಪಾಡು ಅಂದಾಜು ಪಟ್ಟಿಯ ಮೊತ್ತವು ಟೆಂಡರ್ ಅನುಮೋದಿತ ಮೊತ್ತದ ಒಳಗಿರುವುದರಿಂದ ಹಾಗೂ ಪಾಲಿಕೆಗೆ ಆರ್ಥಿಕ ಹೊರೆಯಾಗಿರುವುದರಿಂದ ಮಾರ್ಪಾಡು ಅಂದಾಜು ಪಟ್ಟಿ ಮತ್ತು ವರ್ಕ ಸ್ಲಿಪ್ ಗೆ ಅನುಮೋದನೆ ಹಾಗೂ ಡಿ–ಫ್ರೀಜ್ ಮಾಡಲು ಶಿಫಾರಸ್ಸು ಮಾಡಿರುವ ವಿಷಯವನ್ನು ಅವಗಾಹನೆಗೆ ಸಲ್ಲಿಸಿದೆ.

